**ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ 22–04–2026**

ಪಾಟೀಸವಾಲು ಃ ಆರೋಪಿತರ ಪರ ವಕೀಲರಿಂದ

ಮೊದಲಿಗೆ ನಾನು ಸಿದ್ದಾಪುರ ಪಟ್ಟಣ ಪಂಚಾಯತದಲ್ಲಿ ಸದಸ್ಯನಾಗಿದ್ದೆನು ಎಂದರೆ ಸರಿ. ನಾನು ಭಾರತೀಯ ಜನತಾ ಪಕ್ಷದ ಸದಸ್ಯನಾಗಿರುತ್ತೇನೆ. ಚಾಸಾ-1 ರವರು ನನಗೆ ದೂರದ ಸಂಬಂದಿ ಇರುತ್ತಾರೆ. ಚಾಸಾ-1 ರವರ ಊರಿಗೂ ಹಾಗೂ ನನ್ನ ಊರಿಗೂ ಸುಮಾರು 15 ಕಿ.ಮೀ ಅಂತರ ಇರುತ್ತದೆ.

ಚಾಸಾ-1 ರವರ ಜಮೀನಿನ ತಕರಾರನ್ನು ಬಗೆಹರಿಸಲು ನೀವೇನಾದರೂ ಹೋಗಿರುತ್ತಿರಾ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಹಾಗೆ ಸುಮ್ಮನೆ ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಈ ಪ್ರಕರಣದಲ್ಲಿ ಪೋಲೀಸರ ಮುಂದೆ ಹೇಳಿಕೆ ನಿಡಿರುವುದಿಲ್ಲ. ಚಾಸಾ-1 ರವರ ಜಮೀನು ಯಾವ ಊರಿನಲ್ಲಿ ಇರುತ್ತದೆ ಎಂದು ಹಾಗೂ ಅದರ ಸರ್ವೆ ನಂಬರ ನನಗೆ ಗೊತ್ತಿಲ್ಲ. ಚಾಸಾ-1 ರವರ ಜಮೀನಿಗೆ ಹೋದ ದಿನಾಂಕ ನನಗೆ ನೆನಪಿಲ್ಲ. ನಾನು ಅಲ್ಲಿಗೆ ಹೊದಾಗ ಸಮಯ 11-00 ಗಂಟೆ ಆಗಿರಬಹುದು. ನಾನು ಹಾಗೂ ಭಾಸ್ಕರರವರು ಇಬ್ಬರು ಅಲ್ಲಿಗೆ ಹೋಗಿದ್ದೆವು. ಭಾಸ್ಕರರವರು ನನ್ನ ಜೊತೆಗೆ ಬಂದಿದ್ದರು. ನನಗೆ ಆರೋಪಿತರ ಪರಿಚಯ ಇರುವುದಿಲ್ಲ.

ಮಂಜುನಾಥ ರವರ ದೂರಿನ ಮೇಲೆ ನನ್ನ ಮೇಲೆ ಒಂದು ಕ್ರಿಮಿನಲ್ ಪ್ರಕರಣ ದಾಖಲಾಗಿರುತ್ತದೆ ಎಂದರೆ ಸರಿ. ಆ ದಿನ ನಿಮ್ಮ ಮತುತ ಮಂಜುನಾಥ ನಡುವೆ ಜಗಳ ಆಗಿರುತ್ತದೆಯೇ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಆಗಿರುತ್ತದೆ ಎಂದು ನುಡಿಯುತ್ತಾರೆ. ಚಾಸಾ-1 ರವರು ಗಲಭೆ ಆಗಿತ್ತು ಎಂದು ದೂರನ್ನು ನೀಡಿದ್ದು, ಅದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಗಲಾಟೆಯಲ್ಲಿ ಯಾರು ಏನು ಮಾತನಾಡಿರುತ್ತಾರೆ ಹಾಗೂ ಯಾರು ಏನು ಮಾಡಿರುತ್ತಾರೆಯೇ ಎಂದು ನಿಮಗೆ ಮಾಹಿತಿ ಇದೇಯೇ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಾನು ಸ್ಥಳದಲ್ಲಿ ಸುಮಾರು ½ ಗಂಟೆಗಳ ಕಾಲ ಇದ್ದೆನು. ಜಗಳವನ್ನೆನಾದರೂ ನೀವು

ಬಿಡಿಸಿರುತ್ತಿರಾ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸ್ಥಳದಿಂದ ನೀವು ಹೋಗುವ ಮೊದಲೇ ಚಾಸಾ-1 ರವರು ಹೋಗಿರುತ್ತಾರೆಯೇ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ದೇವೆಂದ್ರರವರು ನನ್ನ ಜೊತೆಗೆ ಹೊರಟಿರುತ್ತಾರೆ ಎಂದು ನುಡಿಯುತ್ತಾರೆ.

ನೀವು ಸ್ಥಳಕ್ಕೆ ಹೊದಾಗ ಗದ್ದೆಯಲ್ಲಿ ಯಾರು ಯಾರು ಕೆಲಸ ಮಾಡುತ್ತಿದ್ದರು ಎನ್ನುವ ಬಗ್ಗೆ ಮಾಹಿತಿ ಇದೆಯೇ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಗದ್ದೆಯಲ್ಲಿ ಕೆಲಸ ಮಾಡುತ್ತಿದ್ದು, ಅವರುಗಳು ಯಾರು ಎಂದು ನನಗೆ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಗದ್ದೆಯಲ್ಲಿ ನಾಟಿ ಕೆಲಸ ನಡೆಯುತ್ತಿತ್ತು. ಗದ್ದೆಯಲ್ಲಿ ಸುಮಾರು 10-15 ಜನ ಕೆಲಸ ಮಾಡುತ್ತಿದ್ದರು.

ದೇವೇಂದ್ರ ಹಾಗೂ ಅವರ ತಮ್ಮ ಆರೋಪಿತರ ಪೈಕಿ ಯಾರು ಯಾರಿಗೆ ಹಲ್ಲೆ ಮಾಡಿರುತ್ತಾರೆ ಎಂದು ನಿಮಗೆ ಮಾಹಿತಿ ಇದೆಯೇ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

ದೇವೇಂದ್ರ ಹಾಗೂ ಅವರ ತಮ್ಮನ ಮೇಲೆ ಯಾರು ಯಾರು ಹಲ್ಲೆ ಮಾಡಿರುತ್ತಾರೆ ಎಂದು ನಿಮಗೆ ಮಾಹಿತಿ ಇದೆಯೇ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಈ ಪ್ರಕರಣದ ಬಗ್ಗೆ ನೀಮಗೆ ಬಾಕಿ ಮಾಹಿತಿ ಇರುವುದಿಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ.

ಚಾಸಾ-1 ಮತ್ತು 4 ರವರುಗಳಿಗೆ ರಸ್ತೆಯನ್ನು ಬಿಡಿಸುವ ಸಲುವಾಗಿ ನಾನು ಅಲ್ಲಿಗೆ ಹೋಗಿ ಮಂಜುನಾಥ ಹಾಗೂ ಶಿವಾನಂದರವರುಗಳಿಗೆ ಬೆದರಿಕೆ ಹಾಕಲು ಹೋಗಿರುತ್ತೇನೆ ಎಂದರೆ ಸರಿಯಲ್ಲ.

ನಿಮ್ಮ ಮೇಲೆ ಒಂದು ಪ್ರಕರಣ ದಾಖಲಾಗಿರುವ ಕಾರಣ ಆರೋಪಿತರ ವಿರುದ್ಧ ನಾನು ಈ ಸುಳ್ಳು ಪ್ರಕರಣವನ್ನು ಚಾಸಾ-1 ರವರ ಮುಖಾಂತರ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಸಾ.ಓ.ಹೇ.ಸ.ಒ

ಸಹಿ ಇದೆ.

ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಸಿದ್ದಾಪುರ

**ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ 22–04–2026**

ಪಾಟೀಸವಾಲು ಃ ಆರೋಪಿತರ ಪರ ವಕೀಲರಿಂದ

ನಿ.ಪಿ-1 ರಲ್ಲಿರುವ ಬರೆದಿರುವ ಬರವಣಿಗೆ ನಮ್ಮ ಸಿಬ್ಬಂದಿಯದ್ದು ಆಗಿರುತ್ತದೆ. ನಿ.ಪಿ-1 ನ್ನು ಬರೆಯುವ ಹೊತ್ತಿಗೆ ನೀವು ಅಲ್ಲಿ ಹಾಜರು ಇದ್ದಿರಾ? ಎನ್ನು ವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ.

ದೂರು ಕೊಡುವ ಕಾಲಕ್ಕೆ ದೂರುದಾರರು ಆರೋಪಿತರ 10 ಜನರ ಹೆಸರು ಹೇಳಿರುತ್ತಾರೆಯೇ ? ಎನ್ನುವ ಪ್ರಶ್ನೆಗೆ ಸಾಕ್ಷಿಯು 9 ಜನರ ಹೆಸರನ್ನು ಹೇಳಿದ್ದು ನಂತರ ದೂರುದಾರರ ಮರುಹೇಳಿಕೆಯಲ್ಲಿ ರಮೇಶ ಎನ್ನುವವರ ಹೆಸರನ್ನು ಹೇಳಿರುತ್ತಾರೆ ಎಂದು ನುಡಿಯುತ್ತಾರೆ.

ದೂರುದಾರರು ಪೋಲೀಸರ ಮುಂದೆ ಮರುಹೇಳಿಕೆ ನೀಡಿಲ್ಲ ಎಂದು ನ್ಯಾಯಾಲಯದಲ್ಲಿ ಹೇಳಿರುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಮರು ಹೇಳಿಕೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ.

ದೂರನ್ನು ಯಾರು ಬರೆದಿರುತ್ತಾರೆ ಎಂದು ನಮೂದು ಇರುತ್ತದೆಯೇ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

ದೂರುದಾರರು ಸರ್ಕಾರಿ ಆಸ್ಪತ್ರೆಯಲ್ಲಿ ದಾಖಲಾದ ಬಗ್ಗೆ ನಿಮಗೆ ಮಾಹಿತಿ ಬಂದಿತ್ತೆ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸದರಿ ಎಂ ಎಲ್ ಸಿ ಮಾಹಿತಿಯು ನಮಗೆ ದಿಃ 16-07-2020 ರಂದು ಬೆಳಿಗ್ಗ 12-00 ಗಂಟೆಗೆ ಬಂದಿರುತ್ತದೆ. ದೂರನ್ನು 12-30 ಗಂಟೆಯಿಂದ 1-00 ವರೆಗೆ ಪಡೆದುಕೊಂಡಿರುತ್ತೇವೆ. ಎಂ ಎಲ್ ಸಿ ಮಾಹಿತಿಯನ್ನು ನಾನು ನ್ಯಾಯಾಲಯಕ್ಕೆ ನೀಡಿರುತ್ತೇನೆ. ಆ ರೀತಿ ಎಂ ಎಲ್ ಸಿ ಮಾಹಿತಿಯನ್ನು ನ್ಯಾಯಾಲಯಕ್ಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ಮಹಜರ್ ನ್ನು ದಿಃ 17-07-2020 ರಂದು ನಾನೇ ಮಾಡಿರುತ್ತೇನೆ. ಪಂಚರನ್ನು ನೀವೆ ಕರೆದುಕೊಂಡು ಬಂದಿರುತ್ತೀರಾ ? ಎನ್ನುವ ಪ್ರಶ್ನೆಗೆ ಸಾಕ್ಷಿಯು

ನಾವು ಸ್ಥಳಕ್ಕೆ ಹೋದ ನಂತರ ಪಂಚರನ್ನು ಬರಮಾಡಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಗೋಳಿಕ್ಕೈ ಗ್ರಾಮದಿಂದ ಪಂಚನಾಮೆ ಸ್ಥಳಕ್ಕೆ ಎಷ್ಟು ದೂರ ಇರುತ್ತದೆ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಅಂದಾಜು 3-4 ಕಿ. ಮೀ. ಇರಬಹುದು ಎಂದು ನುಡಿಯುತ್ತಾರೆ. ಪಂಚನಾಮೆ ಮಾಡಿದ ಸ್ಥಳದ ಸರ್ವೆ ನಂಬರ ನನಗೆ ಗೊತ್ತಿರುವುದಿಲ್ಲ. ಪಂಚನಾಮೆ ಮಾಡಿದ ಸ್ಥಳವು ಯಾರಿಗೆ ಸೇರಿದ್ದು ಎಂದು ನೀವು ದಾಖಲೆ ಪಡೆದುಕೊಂಡಿರುತ್ತೀರಾ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಪಂಚನಾಮೆಯನ್ನು ನಮ್ಮ ಸಿಬ್ಬಂದಿ ಬರೆದಿರುತ್ತಾರೆ.

ಬಡಿಗೆ ಹಾಗೂ ಕತ್ತಿಗಳು ಎಲ್ಲಿ ಇದ್ದವು ಹಾಗೂ ಅವುಗಳನ್ನು ಯಾರು ತೆಗೆದುಕೊಂಡು ಬಂದಿರುತ್ತಾರೆ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಬಡಿಗೆಯು ಕಾಲುವೆ ಹತ್ತಿರ ಬದ್ದಿದ್ದು, ಕತ್ತಿಯು ಗದ್ದೆಯ ಒಳಗೆ ಬಿದ್ದಿತ್ತು ಎಂದು ನುಡಿಯುತ್ತಾರೆ.

ಗದ್ದೆಯಲ್ಲಿ ನಾಟಿ ಮಾಡುವ ಪ್ರಕ್ರಿಯೆ ನಡೆದಿತ್ತೆ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಕತ್ತಿಗೆ ಮಣ್ಣು ಮೆತ್ತಿಕೊಂಡಿತ್ತೆ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ.

ನ್ಯಾಯಾಲಯದ ಮುಂದೆ ಇರುವ ಮುದ್ದೆಮಾಲುಗಳಲ್ಲಿ ಒಂದು ಕತ್ತಿಯನ್ನು ಸಾಕ್ಷಿಗೆ ತೋರಿಸಲಾಗಿ, ಅದರಲ್ಲಿ ಮಣ್ಣು ತಾಗಿರುತ್ತದೆಯೆ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಪ್ರಸ್ತುತ ಇಲ್ಲ ಎಂದು ನುಡಿಯುತ್ತಾರೆ.

ಪಂಚನಾಮೆಯನ್ನು ಯಾರು ಬರೆಸಿರುತ್ತಾರೆ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಪಂಚರು ಹೇಳಿ ಬರೆಸಿರುತ್ತಾರೆ ಎಂದು ನುಡಿಯುತ್ತಾರೆ.

ಬಡಿಗೆಗಳು ಹಾಗೂ ಕತ್ತಿ ಕಾಲುವೆಯಲ್ಲಿ ಬಿದ್ದಿತ್ತು ಎಂದು ಪಂಚನಾಮೆಯಲ್ಲಿ ಬರೆಸಿರುತ್ತಾರೆಯೇ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಬಡಿಗೆಗಳು ಹಾಗೂ ಕತ್ತಿಗೆ ಮಣ್ಣು ತಾಗಿತ್ತು ಎಂದು ಪಂಚನಾಮೆಯಲ್ಲಿ ಬರೆಸಿರುತ್ತಾರೆಯೇ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

ಸ್ಥಳದಲ್ಲಿ ಆ ದಿನ ನೀವು ಎಷ್ಟು ಪಂಚನಾಮೆ ಮಾಡಿರುತ್ತೀರಾ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಎರಡು ಪಂಚನಾಮೆ ಮಾಡಿರುತ್ತೇವೆ ಎಂದು ನುಡಿಯುತ್ತಾರೆ.

ದೂರುದಾರರು ನಿಮಗೆ ರಕ್ತ ತಾಗಿದೆ ಬಟ್ಟೆಯನ್ನೇನಾದರೂ ನೀಡಿರುತ್ತಾರೆಯೇ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ದೂರುದಾರರು ಅವರ ಹೇಳಿಕೆ ಹಾಗೂ ಮರುಹೇಳಿಕೆ ಕಾಲದಲ್ಲಿ ಅವರ ಬಟ್ಟೆಗೆ ರಕ್ತ ಏನಾದರೂ ತಾಗಿತ್ತೆ ಎಂದು ಹೇಳಿಕೆ ನೀಡಿದ್ದರೆ ಎನ್ನುವ ಪ್ರಶ್ನೆಗೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ನಿ.ಪಿ-3 ಮತ್ತು 4 ಪೊಟೊಗಳನ್ನು ನಮ್ಮ ಸಿಬ್ಬಂದಿ ತೆಗೆದಿರುತ್ತಾರೆ. ಪೊಟೊ ಪ್ರಿಂಟ್ ಹಾಕಿಸಿದ ಬಗ್ಗೆ ಸಂಬಂದ ಪಟ್ಟ ವ್ಯಕ್ತಿಯಿಂದ ನಾನು ಪ್ರಮಾಣ ಪತ್ರವನ್ನು ಪಡೆದುಕೊಂಡಿಲ್ಲ.

ದೂರುದಾರರು ಹಾಗೂ ಅವರ ತಮ್ಮ ಹಾಗೂ ಇತರರ ವಿರುದ್ಧ ಒಂದು ಕ್ರಿಮಿನಲ್ ಪ್ರಕರಣ ದಾಖಲಾಗಿರುತ್ತದೆ ಎಂದರೆ ಸರಿ. ಸದರಿ ಪ್ರಕರಣದ ತನಿಖೆಯನ್ನು ನಾನೇ ಮಾಡಿರುತ್ತೇನೆ. 2 ನೇ ಪ್ರಕರಣನ್ನು ತನಿಖೆ ಮಾಡಲು ನೀವು ಸಂಬಂದಪಟ್ಟ ಅಧಿಕಾರಿಗಳಿಂದ ಅನುಮತಿ ಪಡೆದಿರುತ್ತೀರಾ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಮೌಖಿಕವಾಗಿ ಪಡೆದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ.

ನಾನು ಈ ಪ್ರಕರಣದಲ್ಲಿ ಯಾವುದೇ ತನಿಖೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಮೊದಲನೇ ಪ್ರಕರಣದಲ್ಲಿ ನಾನು ತನಿಖೆ ಮಾಡಿರುವ ಕಾರಣ ಈ ಪ್ರಕರಣದಲ್ಲಿ ನನಗೆ ತನಿಖೆ ಮಾಡಲು ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ನಿ.ಪಿ-1 ಕ್ಕೆ ವೈದ್ಯರ ಸಹಿಯನ್ನು ನಾನು ಪಡೆದುಕೊಂಡಿಲ್ಲ. ನಾನು ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಗಜಾನನ ಮತ್ತು ಕೃಷ್ಣ ರವರು ನನ್ನ ಸಮಕ್ಷಮ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

ಈ ಪ್ರಕರಣದಲ್ಲಿ ನಾನು ಪಂಚನಾಮೆ ಮಾಡಿ ಮುದ್ದೆಮಾಲುಗಳನ್ನು ವಶಪಡಿಸಿಕೊಂಡಿರುವ ವಿಚಾರ ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ.

ಸುಧೀರ ಸದಾಶಿವ ನಾಯ್ಕ ರವರು ರಾಜಕೀಯ ಪಕ್ಷದ ಪ್ರಮುಖರು ಎಂದರೆ ಸರಿಯಲ್ಲ. ಸುಧೀರ ಸದಾಶಿವ ನಾಯ್ಕ ರವರ ಒತ್ತಡದ ಮೇರೆಗೆ ನಾನು ಸುಳ್ಳು

ದೂರನ್ನು ಪಡೆದುಕೊಂಡು ಸುಳ್ಳು ಅಂತಿಮ ವರದಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ತಪ್ಪನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಸಾ.ಓ.ಹೇ.ಸ.ಒ

ಸಹಿ ಇದೆ.

ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಸಿದ್ದಾಪುರ